495 (869) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕ್ರೀಡಾಂಗಣಗಳೆಷ್ಟು;

ಆ) ಬೆಂಗಳೂರು ನಗರದಲ್ಲಿರುವ ಕ್ರೀಡಾಂಗಣಗಳೆಷ್ಟು;

ಇ) ಬೆಂಗಳೂರು ನಗರದಲ್ಲಿರುವ ಕಂಠೀರವ ಕ್ರೀಡಾಂಗಣ ಸ್ಥಳವನ್ನು ಖಾಸಗಿ ಮಲ್ಯ ಆಸ್ಪತ್ರೆಗೆ ಬರುವ ವಾಹನ ನಿಲ್ದಾಣಕ್ಕೆ ಕೊಡಲು ಕಾರಣಗಳೇನು? (ವಿವರ ನೀಡುವುದು)

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು) :

ಅ) ರಾಜ್ಯದಲ್ಲಿರುವ ಕ್ರೀಡಾಂಗಣಗಳು

1) ಜಿಲ್ಲಾ ಮಟ್ಟದ ಕ್ರೀಡಾಂಗಣಗಳು	26
2) ತಾಲ್ಲೂಕು ಮಟ್ಟದ ಕ್ರೀಡಾಂಗಣಗಳು	29
ಒಟ್ಟು	**55**

ಆ) ಬೆಂಗಳೂರು ನಗರದಲ್ಲಿ ಯುವಜನಸೇವಾ ಮತ್ತು ಕ್ರೀಡಾ ಇಲಾಖೆಯ 4 ಹೊರಾಂಗಣ ಹಾಗೂ 2 ಒಳಾಂಗಣ ಕ್ರೀಡಾಂಗಣಗಳಿವೆ.

ಇ) 1997 ಮೇ ಮತ್ತು ಜೂನ್ ನಲ್ಲಿ 4ನೇ ರಾಷ್ಟ್ರೀಯ ಕ್ರೀಡಾಕೂಟ ನಡೆಸಿದ ನಂತರ ಶ್ರೀ ಕಂಠೀರವ ಕ್ರೀಡಾ ಸಂಕೀರ್ಣದಲ್ಲಿ ನಡೆಯುವ ತರಬೇತಿಗಾಗಿ ಮತ್ತು ರಾಜ್ಯದ ಕ್ರೀಡಾ ಸಂಸ್ಥೆಗಳು ನಡೆಸುವ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಲು ಆಗಮಿಸುವ ಹೆಚ್ಚಿನ ಸಂಖ್ಯೆಯ ಕ್ರೀಡಾಪಟುಗಳಿಗೆ ವಾಹನ ನಿಲುಗಡೆಗೆ ಅನುಕೂಲವಾಗುವಂತೆ ಮತ್ತು ನಿರ್ಮಾಣವಾಗಿರುವ ಬೃಹತ್ ಕ್ರೀಡಾಂಗಣಗಳನ್ನು ನಿರ್ವಹಣೆ ಮಾಡುವ ದೃಷ್ಟಿಯಿಂದ ಆದಾಯದ ಅವಶ್ಯಕತೆ ಇದ್ದುದರಿಂದ ಮತ್ತು ಸಾರ್ವಜನಿಕರ ಅನುಕೂಲಕ್ಕಾಗಿ ವಾಹನ ನಿಲುಗಡೆಯನ್ನು ಶ್ರೀ ಕಂಠೀರವ ಕ್ರೀಡಾ ಸಂಕೀರ್ಣದ ಆಗ್ನೇಯ ಭಾಗದಲ್ಲಿ ವ್ಯವಸ್ಥೆ ಮಾಡಲು ಅಂದಿನ ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರು ರವರ ಸಲಹೆ ಮೇರೆ ಪರಿಶೀಲಿಸಿ ವಾಹನ ನಿಲುಗಡೆ ವ್ಯವಸ್ಥೆಗೆ

ಅವಕಾಶ ಕಲ್ಪಿಸಲಾಯಿತು. ಆದರೆ, ಈ ವ್ಯವಸ್ಥೆಯನ್ನು ಏಪ್ರಿಲ್ 2000 ರಿಂದ ಸ್ಥಗಿತಗೊಳಿಸಲಾಯಿತು. ಸ್ಥಗಿತಗೊಳಿಸಿದ ಕ್ರಮವನ್ನು ಮೇ 2000 ರಲ್ಲಿ ಒಂದು ಸಾರ್ವಜನಿಕ ಹಿತಾಸಕ್ತಿ ರಿಟ್ ಅರ್ಜಿ ಕ್ರಮ ಸಂಖ್ಯೆ : 16714/2000 ಇದರ ಮೇರೆಗೆ ಪ್ರಶ್ನಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿತು. ನಂತರ ನ್ಯಾಯಾಲಯದ ಸೂಚನೆಗನುಗುಣವಾಗಿ ವಾಹನ ನಿಲುಗಡೆ ವ್ಯವಸ್ಥೆಯನ್ನು ತಾತ್ಕಾಲಿಕವಾಗಿ ಮುಂದುವರಿಸಿದ್ದು, ಈ ಅವಧಿಯು ದಿನಾಂಕ : 15–11–2007ಕ್ಕೆ ಮುಕ್ತಾಯವಾಗುತ್ತದೆ.

496 (870) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನಗರಸಭೆಗಳು, ಟೌನ್ ಮುನಿಸಿಪಾಲಿಟಿಗಳು ಹಾಗೂ ಟೌನ್ ಪಂಚಾಯ್ತಿಗಳು ಎಷ್ಟು;

ಆ) ಆಕ್ಟ್ರಾಯ್ ರದ್ದಾದ ಮೇಲೆ ಈ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಸರ್ಕಾರ ಯಾವ ರೀತಿಯ ಹಣವನ್ನು ನೀಡಲಾಗುತ್ತಿದೆ;

ಇ) ಹಣದ ಕೊರತೆಯಿಂದ ಬಹುತೇಕ ಸಂಸ್ಥೆಗಳು ತೊಂದರೆಗೆ ಸಿಕ್ಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲಂಗೂರು ಶ್ರೀನಿವಾಸ (ಪೌರಾಡಳಿತ ಸಚಿವರು) :

ಅ) 1) ನಗರಸಭೆಗಳು – 44

2) ಪುರಸಭೆಗಳು – 94

3) ಪಟ್ಟಣ ಪಂಚಾಯ್ತಿಗಳು – 68

ಆ) ಆಕ್ಟ್ರಾಯ್ ರದ್ದಾದ ನಂತರ ರಾಜ್ಯ ಹಣಕಾಸು ಆಯೋಗದಿಂದ ಹಾಗೂ 12ನೇ ಹಣಕಾಸು ಆಯೋಗದಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಕಾರ್ಯ ನಿರ್ವಹಣೆಗೆ ಹಣ ನೀಡಲಾಗುತ್ತಿದೆ.

ಇ) ಬಂದಿದೆ.